ಅ) ಸಾಲಾಳು ಸಿಬ್ಬಂದಿಯವರ ಕಾರ್ಯಲೋಪದ ಪ್ರಕರಣಗಳು ಮಂಡಳಿಯ ಗಮನಕ್ಕೆ ಬಂದಾಗ ಸಂಬಂಧಪಟ್ಟ ಸಾಲಾಳುಗಳ ಮೇಲೆ ಸೂಕ್ತವಾಗ ಕ್ರಮ ತೆಗೆದುಕೊಂಡು ಅವರು ಸಾರ್ವಜನಿಕ ಬಳಕೆದಾರರಿಗೆ ಸಮಾಧಾನಕರವಾಗುವಂತೆ ಕೆಲಸ ಮಾಡಲು ಏರ್ಪಾಟುಮಾಡಲಾಗುವುದು.

ಆ) ಮೂಲತಃ ಕರ್ತವ್ಯಲೋಪವೇನಾದರೂ ನಿರೂಪಣೆಯಾದಲ್ಲಿ, ತಪ್ಪಿತಸ್ಥ ಸಿಬ್ಬಂದಿ ವರ್ಗದ ಮೇಲೆ ಸಿ.ಡಿ.ಸಿ.ಎ.ನಿಯಾಮವಳಿಯ ಪ್ರಕಾರ ಕ್ರಮ ಜರುಗಿಸಲಾಗುವುದು.

**ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಸಂಖ್ಯೆ.**

3285 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ಸುಮಾರು 5-6 ವರ್ಷಗಳಿಂದ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು?*

*ಆ) ಅಂತಹ ಶಿಕ್ಷಕರ ಸೇವೆಯನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು?*

*ಇ) ಹಾಗಿದ್ದಲ್ಲಿ ಅಂತಹ ಶಿಕ್ಷಕರನ್ನು ಸೇವೆಯಲ್ಲಿ ಖಾಯಂಗೊಳಿಸಲು ಯಾವ ನಿಯಮವನ್ನು ಅನುಸರಿಸಲಾಗಿದೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು)

ಅ) ಪ್ರಾಥಮಿಕ ಶಾಲೆಗಳಲ್ಲಿ 5-6ವರ್ಷಗಳಿಂದ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು ಇರುವುದಿಲ್ಲ. ಆದರೆ 1985ನೇ ಸಾಲಿನಿಂದ 3226 ಶಿಕ್ಷಕರುಗಳು ಗುತ್ತಿಗೆ ಆದಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ನಾಲ್ಕು ಜನ ಉಪನ್ಯಾಸಕರು ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ 749 ಜನ ಗುತ್ತಿಗೆ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಆ) ಸರ್ಕಾರದ ಆದೇಶ ಸಂಖ್ಯೆ : ಇಡಿ 289 ಎನ್‌ಇಎಸ್88 ದಿನಾಂಕ 20-2-91 ರಲ್ಲಿ ಗುತ್ತಿಗೆ ಶಿಕ್ಷಕರ ಸೇವೆಯನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಲು ಆದೇಶಿಸಲಾಗಿದೆ. ಗುತ್ತಿಗೆ ಆಧಾರದ ಉಪನ್ಯಾಸಕರನ್ನು ಆದೇಶ ಸಂಖ್ಯೆ: ಇಡಿ 359 ಡಿಪಿಎ 91 ರಲ್ಲಿ ದಿನಾಂಕ 27-8-91ರಲ್ಲಿ ಸೇವೆಯನ್ನು ಸಕ್ರಮಗೊಳಿಸಲು ಆದೇಶಿಸಿದೆ.

ಇ) ಮೇಲಿನ ಸರ್ಕಾರಿ ಆದೇಶದಲ್ಲಿ ತಿಳಿಸಿರುವಂತೆ ಸದರಿಯವರ ಸೇವೆಯನ್ನು ಸಕ್ರಮಗೊಳಿಸಲಾಗಿದೆ.

**ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು 1991ನೇ ವರ್ಷದಲ್ಲಿ ಜಾಹೀರಾತಿಗಾಗಿ ಖರ್ಚು ಮಾಡಿರುವ ಹಣ.**

3468 - ಡಾ: ಮಲ್ಲಿಕ್ ರೆದ್ದಿ(ಯಾದಗೀರ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

*ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು 1991ನೇ ವರ್ಷದಲ್ಲಿ ಜಾಹೀರಾತಿಗಾಗಿ ಖರ್ಚು ಮಾಡಿರುವ ಒಟ್ಟು ವೆಚ್ಚವೆಷ್ಟು (ತಿಂಗಳುವಾರು ಅಂಕಿ ಅಂಶಗಳನ್ನು ನೀಡುವುದು)*

*ಆ) ಎಷ್ಟು ಜಾಹೀರಾತುಗಳನ್ನು ಬಿಡುಗಡೆ ಮಾಡಿದೆ. ಅದರ ಮೊತ್ತವೆಷ್ಟು?*

*ಇ) ಜಾಹೀರಾತುಗಳನ್ನು ನೀಡಲು ವಿನಂತಿಸಿದ್ದು ಬಿಡುಗಡೆ ಮಾಡದೆ ಇರುವವರ ಹೆಸರು ಮತ್ತು ಬಿಡುಗಡೆ ಮಾಡದಿರಲು ಕಾರಣಗಳು?*

*ಈ) ಸರ್ಕಾರವು ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ ಜಾಹೀರಾತುಗಳನ್ನು ಬಿಡುಗಡೆ ಮಾಡದಿರುವಂತೆ ನಿರ್ದೇಶನ ನೀಡಿರುವುದು ನಿಜವೇ?*

*ಉ) ಹಾಗಿದ್ದಲ್ಲಿ, ಎಂದಿನಿಂದ ಮತ್ತು ಇದಕ್ಕೆ ಕಾರಣಗಳೇನು?*

ಶ್ರೀ ಟಿ.ಎನ್. ನರಸಿಂಹಮೂರ್ತಿ ( ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಮಾರ್ಚ್ 1991ರಲ್ಲಿ ರೂ. 2,500-00 ಹಾಗೂ ಮೇ 1991ರಲ್ಲಿ ರೂ. 1,000-00 ಒಟ್ಟು ರೂ.3,500-00 ಗಳನ್ನು ಜಾಹೀರಾತಿಗಾಗಿ ಖರ್ಚು ಮಾಡಲಾಗಿದೆ.

ಆ) ಎರಡು ಜಾಹೀರಾತುಗಳನ್ನು ಬಿಡುಗಡೆ ಮಾಡಿದೆ. ತಗುಲಿದ ವೆಚ್ಚ ಒಟ್ಟು ರೂ. 3,500-00 ಗಳು.

ಇ) -ಅನುಬಂಧ ಲಗತ್ತಿಸಿದೆ-

ಈ) ಹೌದು- ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಒಳಪಟ್ಟಂತೆ ಎಲ್ಲಾ ಸಾರ್ವಜನಿಕ ಉದ್ಯಮಗಳಿಗೆ.

ಉ) ಆರ್ಥಿಕ ಮಿತವ್ಯಯದ ಕಾರಣ 1982ನೇ ವರ್ಷದಿಂದ ಜಾರಿ ಮಾಡಿದೆ.

## ANNEXURE

1. Lohitha, Kannada Monthly,
   65/10, 6th Main Road,
   2nd Cross, 4th Block,
   Thygarajanagar, Bangalore.
2. The Secretary,
   Institute of Parliament Officers,
   Gandhi Bhavan, Kumarpark East,
   Bangalore.
3. Upliftment of the weaker section
   (India's National Fortnights)
   No. 10/5, Ramappa Road,
   Fraser Town, Bangalore.
4. The Times of India,
   40/7 SNB Lower, 2nd Flor,
   M.G.Road, Bangalore.
5. K.L. Annigeri, Editor,
   Spoorthi Kannada Monthly,
   Gadag.
6. Karnataka Journalist Council,
   No. 56, 24th Cross, 6th Block

Rajajinagar, Bangalore.

7. Gulshan, Home for the Blind,
   A-51, Gulmohar park, New Delhi.
8. Lal Bahadur Mountaining Institute,
   Shastri Bhavan, No.8, Susheela Road,
   Chikkamavalli, Bangalore.
9. Defence Publication Services,
   Post Box No. 5760, 3/6, SRTN,
   New Delhi.
10. Kannada Vishwa Bharathi,
    Publications, Hubli.
11. Indian Express, Madhurai Pvt. Ltd.,
    1 Queens Road, Banglore.

**1990-91ನೇ ಸಾಲಿನಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುದ್ದೀಕರಿಸಲು ನಿಗಧಿ ಪಡಿಸಿದ ಗುರಿ.**

3273 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *1990-91ನೇ ಸಾಲಿನಲ್ಲಿ ನೀರಾವರಿ ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸಲು ನಿಗಧಿಪಡಿಸಿದ್ದ ಗುರಿ ಎಷ್ಟು?*

ಆ) *ಇವುಗಳಲ್ಲಿ ಈ ಅವಧಿಯಲ್ಲಿ ಎಷ್ಟು ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ?*

ಇ) *ವಿದ್ಯುದ್ದೀಕರಣಕ್ಕಾಗಿ ಬಾಕಿ ಇರುವ ಸಂಖ್ಯೆ ಎಷ್ಟು?*

ಈ *1991-92ನೇ ಸಾಲಿನಲ್ಲಿ ಎಷ್ಟು ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲು ಉದ್ದೇಶಿಸಲಾಗಿದೆ?*

ಉ) *ಜುಲೈ 1991ರ ಅಂತ್ಯದ ವರೆವಿಗೆ ವಿದ್ಯುದ್ದೀಕರಿಸಿದ ಸಂಖ್ಯೆ ಎಷ್ಟು?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)

ಅ) 1990-91ನೇ ಸಾಲಿನಲ್ಲಿ 60,000 ನೀರಾವರಿ ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸುವ ಗುರಿಯನ್ನು ನಿಗಧಿ ಪಡಿಸಲಾಗಿದೆ.

ಆ) ಈ ಅವಧಿಯಲ್ಲಿ 69,607 ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸಿದೆ.

ಇ) 1990-91ನೇ ಸಾಲಿನಲ್ಲಿನ ಮಾಡಿದ ಸಾಧನೆಯು ನಿಗದಿಪಡಿಸಲಾದ ಗುರಿಗಿಂತಲೂ ಹೆಚ್ಚಾಗಿದೆ.

ಈ) 1991-92ನೇ ಸಾಲಿನಲ್ಲಿ 60,000 ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸಲು ಉದ್ದೇಶಿಸಲಾಗಿದೆ.

ಉ) ಜುಲೈ 1991ರ ಅಂತ್ಯದ ವರೆಗೆ 12,453ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲಾಗಿದೆ.